# ಕರ್ನಾಟಕ ವಿಧಾನಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 276 |
| ಸದಸ್ಯರ ಹೆಸರು | ಶ್ರೀ ಎನ್. ರವಿಕುಮಾರ್ |
| ಉತ್ತರಿಸುವ ದಿನಾಂಕ | 11.12.2024 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮುಜರಾಯಿ ಇಲಾಖೆಯ ಒಟ್ಟು ಆದಾಯವೆಷ್ಟು; ಅದನ್ನು ಯಾವ ರೀತಿಯಲ್ಲಿ ವೆಚ್ಚ ಮಾಡಲಾಗುತ್ತದೆ; ಮುಜರಾಯಿ ಇಲಾಖೆಯ ಆಡಳಿತಕ್ಕೆ ಒಳಪಟ್ಟ ಎಷ್ಟು ದೇವಸ್ಥಾನಗಳನ್ನು ಕಳೆದ 3 ವರ್ಷಗಳಲ್ಲಿ ಜೀರ್ಣೋದ್ಧಾರಗೊಳಿಸಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಮುಜರಾಯಿ ಇಲಾಖಾ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ಸಂಸ್ಥೆಗಳಲ್ಲಿ ಈ ಕೆಳಕಂಡಂತೆ ಆದಾಯವು ಸ್ವೀಕೃತವಾಗಿರುತ್ತದೆ.<br><br>(ಕೆಳಗಿನ ಕೋಷ್ಟಕ ನೋಡಿ) |

| ಕ್ರ. ಸಂ | ಪ್ರವರ್ಗ / ದೇವಾಲಯ | 2023-24ನೇ ಸಾಲಿನ ಆದಾಯ (ರೂ. ಲಕ್ಷಗಳಲ್ಲಿ) |
|---|---|---|
| 1 | 205 "ಎ" | 74391.68 |
| 2 | 193 "ಬಿ" | 3481.81 |
| | **ಒಟ್ಟು** | **77873.49** |

ಪ್ರವರ್ಗ 'ಸಿ' ದೇವಾಲಯಗಳಲ್ಲಿ ಯಾವುದೇ ಆದಾಯ ಇರುವುದಿಲ್ಲವಾದ್ದರಿಂದ ದೇವಾಲಯಗಳ ಪೂಜಾ ಕಾರ್ಯಗಳ ನಿರ್ವಹಣೆಗಾಗಿ ಅರ್ಚಕರಿಗೆ ತಸ್ತೀಕ್/ ವರ್ಷಾಸನ/ ನಗದು ಸಹಾಯಾನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗುತ್ತದೆ.

ಮುಂದುವರೆದು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖಾ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ಸಂಸ್ಥೆಗಳಲ್ಲಿ ಭಕ್ತರು ನೀಡಿರುವ ಕಾಣಿಕೆ, ಹರಕೆ ಸೇವೆ ಇತ್ಯಾದಿಗಳ ಮೂಲಕ ಬರುವ ಆದಾಯವನ್ನು ಆಯಾಯ ದೇವಾಲಯಗಳ ನಿಧಿ (ಬ್ಯಾಂಕ್ ಖಾತೆ)ಗೆ ಜಮಾ ಮಾಡಲಾಗುತ್ತದೆ. ಅಧಿಸೂಚಿತ ದೇವಾಲಯಗಳಿಗೆ ಬರುವ ಆದಾಯವನ್ನು ಆಯಾಯ ದೇವಾಲಯಗಳ ಬ್ಯಾಂಕ್ ಖಾತೆಯಲ್ಲಿ ಸಂಗ್ರಹಿಸಿ ದೇವಾಲಯದ ನಿರ್ವಹಣೆಗೆ ನಿತ್ಯಕಟ್ಲೆ, ಹೆಚ್ಚು ಕಟ್ಲೆ, ರಥೋತ್ಸವ, ಸಿಬ್ಬಂದಿ ವೆಚ್ಚ,

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>ಅಭಿವೃದ್ಧಿ/ಜೀರ್ಣೋದ್ಧಾರ ಮತ್ತು ಮೂಲ ಭೂತ ಸೌಕರ್ಯ ಹಾಗೂ ದೇವಾಲಯದ ವತಿಯಿಂದ ನಡೆಸುವ ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಉದ್ದೇಶ ಇತ್ಯಾದಿಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆ ಕಲಂ 36(1) ರಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಆಯವ್ಯಯದ ಅನ್ವಯ ಬಳಸಲಾಗುತ್ತದೆ.<br><br>ಆದ್ದರಿಂದ ದೇವಾಲಯಗಳಲ್ಲಿ ಸಂಗ್ರಹಣೆಯಾಗುವ ಆದಾಯವನ್ನು ಆಯಾಯ ದೇವಾಲಯ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಬಳಸಲಾಗುತ್ತದೆ.<br><br>ಕಳೆದ 3 ವರ್ಷಗಳಲ್ಲಿ ದೇವಾಲಯಗಳ ಅಭಿವೃದ್ಧಿ/ಜೀರ್ಣೋದ್ಧಾರಗೊಳಿಸಿರುವ ಧಾರ್ಮಿಕ ಸಂಸ್ಥೆಗಳ ವಿವರಗಳು ಈ ಕೆಳಕಂಡಂತಿದೆ.<br><br><table><tr><th>ಕ್ರ.ಸಂ</th><th>ವರ್ಷ</th><th>ಸಂಸ್ಥೆಗಳ ಸಂಖ್ಯೆ</th></tr><tr><td>1</td><td>2021-22</td><td>1269</td></tr><tr><td>2</td><td>2022-23</td><td>1751</td></tr><tr><td>3</td><td>2023-24</td><td>1260</td></tr></table></td></tr>
<tr><td>ಆ)</td><td>ಮುಜರಾಯಿ ಇಲಾಖೆಯ ವತಿಯಿಂದ 2019-20 ಮತ್ತು 2021-22ರ ಅವಧಿಯಲ್ಲಿ ಎಷ್ಟು ಮೊತ್ತದ ಅನುದಾನವನ್ನು ಖಾಸಗಿ ದೇವಸ್ಥಾನಗಳಿಗೆ ನೀಡಲಾಗಿದೆ; ಇದೇ ಅವಧಿಯಲ್ಲಿ ಮುಜರಾಯಿ ಇಲಾಖೆಯ ದೇವಸ್ಥಾನಗಳಿಗೆ ನೀಡಲಾದ ಅನುದಾನವೆಷ್ಟು; (ಜಿಲ್ಲಾವಾರು ವಿವರ ನೀಡಿ, ಸಿ ಎ ಜಿ ವರದಿ 2024 ಪುಸ್ತಕ ಮೂರು)</td><td>ಮುಜರಾಯಿ ಇಲಾಖೆ ವತಿಯಿಂದ 2019-20ನೇ ಸಾಲಿನಲ್ಲಿ ಒಟ್ಟು ರೂ.10166.40 ಲಕ್ಷಗಳು ಮತ್ತು 2020-21 ನೇ ಸಾಲಿನಲ್ಲಿ ಒಟ್ಟು ರೂ.19177.50 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ.<br><br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧ ದಲ್ಲಿ ಒದಗಿಸಿದೆ.<br><br>ಸರ್ಕಾರವು ಧಾರ್ಮಿಕ ಸಂಸ್ಥೆಗಳಿಗೆ ದುರಸ್ಥಿ/ಜೀರ್ಣೋದ್ಧಾರ/ಅಭಿವೃದ್ಧಿ ಕಾರ್ಯಗಳಿಗೆ ಸಾಮಾನ್ಯ ಯೋಜನೆಯಡಿ ಆಯವ್ಯಯದಲ್ಲಿ ಒದಗಿಸಿರುವ ಅನುದಾನದಲ್ಲಿ ಮುಜರಾಯಿ ಇಲಾಖಾ ವ್ಯಾಪ್ತಿಗೆ ಬರುವ ಅಧಿಸೂಚಿತ ಸಂಸ್ಥೆಗಳಿಗೆ ಶೇ.50 ರಷ್ಟು ಮುಜರಾಯೇತರ ಖಾಸಗಿ</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಸಂಸ್ಥೆಗಳಿಗೆ ಶೇ.50 ರಷ್ಟು ಅನುದಾನವನ್ನು ಮೀಸಲಿಡಲು ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 95 ಮುಅಬಿ 2010, ದಿನಾಂಕ:20.09.2010 ಹಾಗೂ ಕಂಇ 372 ಮುಆಬಿ 2012 ದಿನಾಂಕ:19.10.2013ರಲ್ಲಿ ಸೂಚಿಸಲಾಗಿರುತ್ತದೆ. ಆದಾಗ್ಯೂ ಸರ್ಕಾರದಿಂದ ಖಾಸಗಿ ಸಂಸ್ಥೆಗಳಿಗೆ ಪ್ರತಿ ಆರ್ಥಿಕ ಸಾಲಿನಲ್ಲಿ ಶೇ.50 ರಷ್ಟು ಅನುದಾನ ಬಿಡುಗಡೆ ಮಾಡುತ್ತಿರುವುದು ಲೆಕ್ಕ ತಪಾಸಣೆಯಲ್ಲಿ ಕಂಡು ಬಂದಿರುವ ಹಿನ್ನಲೆಯಲ್ಲಿ ಸರ್ಕಾರದ ಮೇಲಿನ ಸುತ್ತೋಲೆಗಳನ್ನು ತಿದ್ದುಪಡಿ ಮಾಡಲು ಪರಿಶೀಲಿಸಲಾಗುತ್ತಿದೆ. |
| ಇ) | ಯಾವುದೇ ಖಾಸಗಿ ದೇವಸ್ಥಾನಕ್ಕೆ ಒಂದು ಆರ್ಥಿಕ ವರ್ಷದಲ್ಲಿ ನೀಡಬಹುದಾದ ಗರಿಷ್ಟ ಅನುದಾನದ ಮೊತ್ತವೆಷ್ಟು; ಉಡುಪಿ ಜಿಲ್ಲೆಯ ಖಾಸಗಿ ದೇವಸ್ಥಾನಕ್ಕೆ 12.75 ಕೋಟಿ ಅನುದಾನ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ದೇವಸ್ಥಾನದಿಂದ ಮುಜರಾಯಿ ಇಲಾಖೆಗೆ ಬಂದ ಆದಾಯವೆಷ್ಟು; ಈ ದೇವಸ್ಥಾನವನ್ನು ಮುಜರಾಯಿ ಇಲಾಖೆಯ ವಶಕ್ಕೆ ಪಡೆಯುವ ಕುರಿತು ಸರ್ಕಾರದ ನಿಲುವೇನು; | ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 95 ಮುಆಬಿ 2010 ದಿನಾಂಕ:20.09.2010 ರ ಪ್ರಕಾರ ರಾಜ್ಯದಲ್ಲಿನ ಧಾರ್ಮಿಕ ಸಂಸ್ಥೆಗಳ ದುರಸ್ಥಿ/ಜೀರ್ಣೋದ್ಧಾರ ಹಾಗೂ ನವನಿರ್ಮಾಣ ಉದ್ದೇಶಕ್ಕಾಗಿ ಸರ್ಕಾರದಿಂದ ಮಂಜೂರಾದ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ತಿಳಿಸಿದ ಮಾರ್ಗಸೂಚಿ ಪ್ರಕಾರ ಖಾಸಗಿ ಧಾರ್ಮಿಕ ಸಂಸ್ಥೆಗಳ ದುರಸ್ಥಿ/ಜೀರ್ಣೋದ್ಧಾರ ಮುಂತಾದವುಗಳಿಗೆ ಸರ್ಕಾರದಿಂದ ಆರ್ಥಿಕ ಸೌಲಭ್ಯದ ಲಭ್ಯತೆಗಳಿಗನುಗುಣವಾಗಿ ಗರಿಷ್ಟ ರೂ.25.00 ಲಕ್ಷದ ವರೆಗೆ ಅನುದಾನವನ್ನು ಬಿಡುಗಡೆ ಮಾಡಬಹುದಾಗಿರುತ್ತದೆ.<br><br>ಉಡುಪಿ ಜಿಲ್ಲೆಯ ಯಾವುದೇ ಒಂದೇ ಖಾಸಗಿ ದೇವಸ್ಥಾನಕ್ಕೆ ಒಂದೇ ಸಾಲಿನಲ್ಲಿ ರೂ.12.75 ಕೋಟಿ ಅನುದಾನ ನೀಡಿರುವುದಿಲ್ಲ. ಆದರೆ ಬೇರೆ ಬೇರೆ ಸಾಲಿನಲ್ಲಿ ಖಾಸಗಿ ದೇವಾಲಯಗಳಿಗೆ ಹೆಚ್ಚಿನ ಅನುದಾನ ಮಂಜೂರು ಮಾಡಲಾಗಿರುತ್ತದೆ.<br><br>ಖಾಸಗಿ ದೇವಸ್ಥಾನದಿಂದ ಮುಜರಾಯಿ ಇಲಾಖೆಗೆ ಯಾವುದೇ ಆದಾಯ ಬಂದಿರುವುದಿಲ್ಲ. ಸದರಿ ದೇವಸ್ಥಾನವನ್ನು ಮುಜರಾಯಿ ಇಲಾಖೆಗೆ ಪಡೆಯುವ ಕುರಿತು ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.<br><br>ಆದರೆ ಯಾವುದೇ ಖಾಸಗಿ |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | | ದೇವಾಲಯವನ್ನು ಅವ್ಯವಸ್ಥಿತ ರೀತಿಯಲ್ಲಿ ನಡೆಸಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಲ್ಲಿ ಧಾರ್ಮಿಕ ದತ್ತಿ ಕಾಯ್ದೆಯ ಕಲಂ 42 ಮತ್ತು 43ರಡಿ ಘೋಷಿತ ಸಂಸ್ಥೆಯೆಂದ ಘೋಷಿಸಿ ದೇವಾಲಯದ ಆಡಳಿತವನ್ನು ಇಲಾಖೆಯ ವ್ಯಾಪ್ತಿಯಲ್ಲಿ ನಿರ್ವಹಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. |
| ಈ) | ಸಾಮಾನ್ಯ ಅನುದಾನಗಳು ಶೇ.80 ರಷ್ಟನ್ನು ಖಾಸಗಿ ದೇವಸ್ಥಾನಗಳಿಗೆ ಬಿಡುಗಡೆಗೊಳಿಸುತ್ತಿರುವುದರಿಂದ ಮುಜರಾಯಿ ದೇವಸ್ಥಾನಗಳು ತಮ್ಮ ದೈನಂದಿನ ಪೂಜಾ ಕೈಂಕರ್ಯಗಳಿಗಾಗಿ ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು? | ಸರ್ಕಾರವು ಧಾರ್ಮಿಕ ಸಂಸ್ಥೆಗಳಿಗೆ ದುರಸ್ಥಿ/ಜೀರ್ಣೋದ್ಧಾರ/ಅಭಿವೃದ್ಧಿ ಕಾರ್ಯಗಳಿಗೆ ಸಾಮಾನ್ಯ ಯೋಜನೆಯಡಿ ಆಯವ್ಯಯದಲ್ಲಿ ಒದಗಿಸಿರುವ ಅನುದಾನದಲ್ಲಿ ಮುಜರಾಯಿ ಇಲಾಖಾ ವ್ಯಾಪ್ತಿಗೆ ಬರುವ ಅಧಿಸೂಚಿತ ಸಂಸ್ಥೆಗಳಿಗೆ ಶೇ.50 ರಷ್ಟು ಮುಜರಾಯೇತರ ಖಾಸಗಿ ಸಂಸ್ಥೆಗಳಿಗೆ ಶೇ.50 ರಷ್ಟು ಅನುದಾನವನ್ನು ಮೀಸಲಿಡಲು ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 95 ಮುಅಬಿ 2010, ದಿನಾಂಕ:20.09.2010 ಹಾಗೂ ಕಂಇ 372 ಮುಆಬಿ 2012 ದಿನಾಂಕ:19.10.2013ರಲ್ಲಿ ಸೂಚಿಸಲಾಗಿರುತ್ತದೆ. ಆದಾಗ್ಯೂ ಸರ್ಕಾರದಿಂದ ಖಾಸಗಿ ಸಂಸ್ಥೆಗಳಿಗೆ ಪ್ರತಿ ಆರ್ಥಿಕ ಸಾಲಿನಲ್ಲಿ ಶೇ.50 ರಷ್ಟು ಅನುದಾನ ಬಿಡುಗಡೆ ಮಾಡುತ್ತಿರುವುದು ಲೆಕ್ಕ ತಪಾಸಣೆಯಲ್ಲಿ ಕಂಡು ಬಂದಿರುವ ಹಿನ್ನೆಲೆಯಲ್ಲಿ ಸರ್ಕಾರದ ಮೇಲಿನ ಸುತ್ತೋಲೆಗಳನ್ನು ತಿದ್ದುಪಡಿ ಮಾಡಲು ಪರಿಶೀಲಿಸಲಾಗುತ್ತಿದೆ. |

ಸಂಖ್ಯೆ: ಕಂಇ 146 ಮುಸಪು 2024

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

ಅನುಬಂಧ-1

2020-21ನೇ ವಿತ್ತ ವರ್ಷದಲ್ಲಿ ರಾಜ್ಯದ ಧಾರ್ಮಿಕ ಸಂಸ್ಥೆಗಳ ದುರಸ್ಥಿ/ ಜೀರ್ಣೋದ್ಧಾರ/ನಿರ್ಮಾಣಕ್ಕಾಗಿ ಮತ್ತು ವಸತಿ ಸೌಕರ್ಯ ಮತ್ತು ಮೂಲಭೂತ ಸೌಕರ್ಯಕ್ಕಾಗಿ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಜಿಲ್ಲಾವಾರು ವಿವರ.(ಅಪ್ ಲೋಡ್-30.3.2021)

| ಕ್ರ ಸಂ | ಜಿಲ್ಲೆ | ಸಂಸ್ಥೆ | ಮೊತ್ತ ರೂ.ಲಕ್ಷಗ |
|---|---|---|---|
| 1 | ಬೆಂಗಳೂರು ನಗರ | 12 | 288.00 |
| 2 | ಬೆಂಗಳೂರು ಗ್ರಾಮಾಂತರ | 6 | 53.00 |
| 3 | ಬಳ್ಳಾರಿ | 11 | 222.50 |
| 4 | ಬಾಗಲಕೋಟೆ | 47 | 561.50 |
| 5 | ಬೆಳಗಾವಿ | 91 | 1432.00 |
| 6 | ವಿಜಯಪುರ | 54 | 468.50 |
| 7 | ಬೀದರ್ | 7 | 50.50 |
| 8 | ಚಾಮರಾಜನಗರ | 19 | 389.50 |
| 9 | ಚಿಕ್ಕಬಳ್ಳಾಪುರ | 3 | 11.50 |
| 10 | ಚಿಕ್ಕಮಗಳೂರು | 37 | 1080.50 |
| 11 | ಚಿತ್ರದುರ್ಗ | 54 | 966.00 |
| 12 | ದಕ್ಷಿಣ ಕನ್ನಡ | 98 | 1127.00 |
| 13 | ಧಾರವಾಡ | 28 | 419.50 |
| 14 | ದಾವಣಗೆರೆ | 32 | 596.50 |
| 15 | ಗದಗ | 24 | 165.00 |
| 16 | ಹಾಸನ | 45 | 457.15 |
| 17 | ಹಾವೇರಿ | 63 | 773.00 |
| 18 | ಕಲಬುರಗಿ | 25 | 438.00 |
| 19 | ಕೊಡಗು | 9 | 89.00 |
| 20 | ಕೋಲಾರ | 3 | 28.00 |
| 21 | ಕೊಪ್ಪಳ | 3 | 62.50 |
| 22 | ಮಂಡ್ಯ | 20 | 918.00 |
| 23 | ಮೈಸೂರು | 66 | 873.35 |
| 24 | ರಾಮನಗರ | 8 | 243.00 |
| 25 | ರಾಯಚೂರು | 13 | 297.00 |
| 26 | ಶಿವಮೊಗ್ಗ | 189 | 2165.00 |
| 27 | ತುಮಕೂರು | 158 | 1450.00 |
| 28 | ಉಡುಪಿ | 223 | 2927.50 |
| 29 | ಉತ್ತರ ಕನ್ನಡ | 34 | 515.00 |
| 30 | ಯಾದಗಿರಿ | 12 | 109.50 |
| | ಒಟ್ಟು | 1394 | 19177.50 |

Scanned with OKEN Scanner

ಅನುಬಂಧ-1

2019-20ನೇ ವಿತ್ತ ವರ್ಷದಲ್ಲಿ ರಾಜ್ಯದ ಧಾರ್ಮಿಕ ಸಂಸ್ಥೆಗಳ ದುರಸ್ಥಿ/ಜೀರ್ಣೋದ್ಧಾರ/ನಿರ್ಮಾಣಕ್ಕಾಗಿ ಮತ್ತು ವಸತಿ ಸೌಕರ್ಯ ಮತ್ತು ಮೂಲಭೂತ ಸೌಕರ್ಯಕ್ಕಾಗಿ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಜಿಲ್ಲಾವಾರು ವಿವರ.(31.03.2020)

| ಕ್ರಮ ಸಂಖ್ಯೆ | ಜಿಲ್ಲೆ | ಸಂಸ್ಥೆ | ಮಂಜೂರಾದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಬೆಂಗಳೂರು ನಗರ | 26 | 147.00 |
| 2 | ಬೆಂಗಳೂರು ಗ್ರಾಮಾಂತರ | 7 | 35.00 |
| 3 | ಬಳ್ಳಾರಿ | 101 | 697.00 |
| 4 | ಬಾಗಲಕೋಟೆ | 16 | 95.00 |
| 5 | ಬೆಳಗಾವಿ | 77 | 616.00 |
| 6 | ವಿಜಯಪುರ | 20 | 225.00 |
| 7 | ಬೀದರ್ | 19 | 95.00 |
| 8 | ಚಾಮರಾಜನಗರ | 12 | 59.00 |
| 9 | ಚಿಕ್ಕಬಳ್ಳಾಪುರ | 0 | 0.00 |
| 10 | ಚಿಕ್ಕಮಗಳೂರು | 52 | 234.00 |
| 11 | ಚಿತ್ರದುರ್ಗ | 64 | 305.00 |
| 12 | ದಕ್ಷಿಣ ಕನ್ನಡ | 125 | 899.00 |
| 13 | ಧಾರವಾಡ | 25 | 165.00 |
| 14 | ದಾವಣಗೆರೆ | 103 | 431.00 |
| 15 | ಗದಗ | 42 | 244.00 |
| 16 | ಹಾಸನ | 86 | 475.00 |
| 17 | ಹಾವೇರಿ | 43 | 250.00 |
| 18 | ಕಲಬುರಗಿ | 54 | 259.90 |
| 19 | ಕೊಡಗು | 34 | 174.00 |
| 20 | ಕೋಲಾರ | 22 | 132.00 |
| 21 | ಕೊಪ್ಪಳ | 30 | 60.00 |
| 22 | ಮಂಡ್ಯ | 14 | 301.00 |
| 23 | ಮೈಸೂರು | 73 | 205.00 |
| 24 | ರಾಮನಗರ | 16 | 108.00 |
| 25 | ರಾಯಚೂರು | 26 | 200.00 |
| 26 | ಶಿವಮೊಗ್ಗ | 136 | 579.50 |
| 27 | ತುಮಕೂರು | 67 | 499.00 |
| 28 | ಉಡುಪಿ | 301 | 1740.50 |
| 29 | ಉತ್ತರ ಕನ್ನಡ | 79 | 400.50 |
| 30 | ಯಾದಗಿರಿ | 4 | 35.00 |
| 31 | ಹೊರರಾಜ್ಯ | 1 | 500.00 |
| | ಒಟ್ಟು | 1675 | 10166.40 |

ಆಯುಕ್ತರ ಪರವಾಗಿ
ಹಿಂದೂ ಧಾರ್ಮಿಕ ಸಂಸ್ಥೆಗಳು
ಧರ್ಮದಾಯ ದತ್ತಿಗಳ ಇಲಾ
[illegible] ಬೆಂಗಳೂರು-5[illegible]

Scanned with OKEN Scann